# ಭಗವಂತನಿಂದ ಬಹುದೊಡ್ಡ ಭರವಸೆ

ಶಶಿಕಲಾ ಶ್ರೀಧರ್

ಆಧ್ಯಾತ್ಮಿಕ ಸಾಧನೆ ಎಂಬುದು ಒಂದು ಸುದೀರ್ಘ ಪಯಣ. ಇದರಲ್ಲಿ ಏಳು, ಬೀಳುಗಳು ಅತ್ಯಂತ ಸಹಜ. ಆದರೆ ಸಾಧಕನು ಇವುಗಳನ್ನು ದಾಟಿ ಮುಂದೆ ಸಾಗುವಾಗ ಹತ್ತು ಹಲವು ಭಾವನೆಗಳಿಗೆ ಒಳಗಾಗುತ್ತಾನೆ. ಅನೇಕ ವೇಳೆ ಸಂದೇಹ, ಆತಂಕ, ತಲ್ಲಣಗಳ ಅಸ್ಥಿರ ಮನೋಯಾತನೆಗಳನ್ನು ಅನುಭವಿಸಬೇಕಾಗುವುದು. ಅದಕ್ಕೆ ಅತ್ಯುತ್ತಮ ಔಷಧವೇ ಶ್ರೀಕೃಷ್ಣನಂತಹ ಮಹಾಪುರುಷರ ದಿವ್ಯನುಡಿ. ಈ ಕುರಿತು ಇಲ್ಲಿ ವಿವರಿಸಿರುವ ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ಪರಿಣತರು.



ಭಗವಂತನನ್ನು ದರ್ಶಿಸಬೇಕು, ಬೆಳಕನ್ನು ಕಾಣಬೇಕು, ಬಾಳಿಗೆ ಒಂದು ಅರ್ಥವನ್ನು ಕಂಡುಕೊಳ್ಳಬೇಕು ಎಂಬುದು ಪ್ರಾಮಾಣಿಕ ಸಾಧಕರೆನಿಸಿದ ನಮ್ಮೆಲ್ಲರ ಹಂಬಲ. ಬಾಳಿನ ತುತ್ತತುದಿಯ ಈ ಗುರಿಯನ್ನು ಸೇರಲು ಸದ್ಗುರುವಿನಿಂದ ಸಾಧನೆಯ ದೀಕ್ಷೆ ಪಡೆದು, ಗುರುವಿನ ಮಾರ್ಗದರ್ಶನದಂತೆ ನಾಮಜಪ, ಭಗವದ್ಧ್ಯಾನ, ಸಜ್ಜನರ ಸಂಗ, ಸದ್ವಿಚಾರಗಳುಳ್ಳ ಶಾಸ್ತ್ರಾಧ್ಯಯನ ಇವುಗಳನ್ನು ಪ್ರಾಮಾಣಿಕವಾಗಿ ಆಚರಿಸುತ್ತಾ, ಅಧ್ಯಾತ್ಮದ ಹಾದಿಯಲ್ಲಿ ಸಾಗುತ್ತಿದ್ದೇವೆ. ಸನಾತನ ಋಷಿಪರಂಪರೆಗೆ ನಾವು ಸೇರಿದವರೇ ಆದರೂ ಅವರಷ್ಟು ಕಠಿಣವೂ ತೀವ್ರವೂ ಆದ ತಪಶ್ಚರ್ಯೆ ಕಲಿಯುಗದವರಾದ ನಮ್ಮಿಂದ ಸಾಧ್ಯವಾಗುತ್ತಿಲ್ಲ. ನಮ್ಮ ಸಾಧನೆ ಅಧ್ಯಾತ್ಮದ ಹಾದಿಯಲ್ಲಿ ನಿಧಾನಗತಿಯಲ್ಲಿ ಸಾಗುತ್ತಿದೆ. ಇದು ನಮ್ಮ ಶ್ರದ್ಧೆಯ ಮಿತಿಯೋ, ಭಕ್ತಿಯ ಕೊರತೆಯೋ ಅಥವಾ ಯುಗಧರ್ಮವೋ ಅರ್ಥವಾಗುತ್ತಿಲ್ಲ. ಕುಂಟು ಹೆಜ್ಜೆ ಹಾಕುತ್ತಿರುವ ನಾವು ಗುರಿ ಮುಟ್ಟುವುದೆಂದು ? ಎಂತು ? ಭಗವತ್ಪ್ರಾಪ್ತಿ ನಮ್ಮ ಪಾಲಿಗಿಲ್ಲವೇ ಎಂಬ ಚಿಂತೆ ಕಾಡುತ್ತಿದೆ. ಭಗವಂತನಿತ್ತ ಈ ಮಾನವ ಜನ್ಮವನ್ನು ಹಾಳುಮಾಡಿಕೊಳ್ಳುವ ಹುಚ್ಚಪ್ಪರಾಗುತ್ತಿರುವೆವೇನು? ಬಾಳಿನ ಸಾರ್ಥಕತೆ ನಮ್ಮ ಪಾಲಿಗಿಲ್ಲವೇನು?

ಈ ಧರ್ಮದ ಹಾದಿಯಲ್ಲಿ ಕಣ್ಮುಂದೆ ಬರುವ ಮತ್ತೊಂದು ದೊಡ್ಡ ಪ್ರಶ್ನೆ ಒಂದು ವೇಳೆ ನಾವು ಅರ್ಧ ದಾರಿಯಲ್ಲಿ ಸಾಗುತ್ತಿರುವಾಗ ಸಾವು ಸಮೀಪಿಸಿದರೆ, ಅದುವರೆಗೂ ಕಷ್ಟಪಟ್ಟು ಸಾಗಿದ ನಮ್ಮ ಆಧ್ಯಾತ್ಮಿಕ ಪಯಣ ವ್ಯರ್ಥವಾಗಿಬಿಡುವುದೆ? ನಾವು ಪತಿತರಾಗಿಬಿಡುವೆವೇನು?

ಇದು ನಮ್ಮ ಪ್ರಶ್ನೆ ಮಾತ್ರವಲ್ಲ, ಮಹಾಭಾರತದ ಮಹಾಧನುರ್ಧಾರಿ ಪಾರ್ಥನಿಗೂ ಕಾಡಿದ ಪ್ರಶ್ನೆ. ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಧರ್ಮಾಧರ್ಮಗಳ ಪ್ರತೀಕರಾಗಿದ್ದ ಪಾಂಡವ – ಕೌರವರ ನಡುವೆ ಮಹಾಸಮರ ಪ್ರಾರಂಭವಾದಾಗ, ಗುರುಹಿರಿಯರೆದುರು, ಬಂಧುಮಿತ್ರರೆದುರು ನಿಂತು ಯುದ್ಧ ಮಾಡಲು ವಿಷಾದಗೊಂಡಿದ್ದ ಅರ್ಜುನನನ್ನು ಅವನ ಕರ್ತವ್ಯ ನಿರ್ವಹಿಸಲು ತನ್ನ ಧೀರಗಂಭೀರವಾಣಿಯಿಂದ ಎಚ್ಚರಿಸುತ್ತಾನೆ ಪಾರ್ಥಸಾರಥಿ ಶ್ರೀಕೃಷ್ಣ. ತನ್ನ ದಿವ್ಯ ಗೀತೆಯ ಮೂಲಕ ಅರ್ಜುನನ ಅನೇಕ ಧರ್ಮಸಂದೇಹಗಳನ್ನು ಪರಿಹರಿಸುತ್ತಾನೆ ಪರಮಾತ್ಮ.

**ಅಯತಿಃ ಶ್ರದ್ಧಯೋಪೇತೋ ಯೋಗಾಚ್ಚಲಿತಮಾನಸಃ ।**
**ಅಪ್ರಾಪ್ಯ ಯೋಗಸಂಸಿದ್ಧಿಂ ಕಾಂ ಗತಿಂ ಕೃಷ್ಣ ಗಚ್ಛತಿ ॥**

**ಕಚ್ಚಿನ್ನೋಭಯವಿಭ್ರಷ್ಟಶ್ಛಿನ್ನಾಭ್ರಮಿವ ನಶ್ಯತಿ ।**
**ಅಪ್ರತಿಷ್ಠೋ ಮಹಾಬಾಹೋ ವಿಮೂಢೋ ಬ್ರಹ್ಮಣಃ ಪಥಿ ॥**

*(ಗೀತಾ, ೬.೩೭–೩೮)*

ಎಂದರೆ, ಶ್ರದ್ಧಾಯುಕ್ತನಾದರೂ ಸಾಕಷ್ಟು ಪ್ರಯತ್ನವನ್ನು ಮಾಡದೆ ಮನಸ್ಸು ಯೋಗದಿಂದ ಚ್ಯುತವಾದರೆ ಯೋಗ ಸಂಸಿದ್ಧಿಯನ್ನು ಅರ್ಥಾತ್ ಭಗವತ್ಸಾಕ್ಷಾತ್ಕಾರವನ್ನು ಪಡೆಯದ

ಅವನು ಅಂತ್ಯಕಾಲದಲ್ಲಿ ಯಾವ ಗತಿಯನ್ನು ಹೊಂದುತ್ತಾನೆ? ಇಹವೂ ಇಲ್ಲ ಪರವೂ ಇಲ್ಲ ಎಂಬಂತಾಗಿ ಉಭಯಭ್ರಷ್ಟನಾಗಿ ಬಿಡುವುದಿಲ್ಲವೆ? ಎಂದು ಪ್ರಶ್ನಿಸುತ್ತಾನೆ.

ಒಬ್ಬ ಸಾಧಕನಿಗೆ ಅಪಾರವಾದ ಶ್ರದ್ಧೆ ಇದೆ. ತಕ್ಕಮಟ್ಟಿಗೆ ಪ್ರಾಮಾಣಿಕವಾಗಿ ಸಾಧನೆಯನ್ನೂ ಮಾಡುತ್ತಿದ್ದಾನೆ. ಆದರೆ ಅವನ ಅವಸಾನಕಾಲವು ಪ್ರಾಪ್ತವಾಗಿಬಿಟ್ಟಿದೆ. ಸಾಧನೆಯನ್ನು ಮುಂದುವರಿಸಲು ಅಸಮರ್ಥನಾಗಿದ್ದಾನೆ. ಮನಸ್ಸು ಯೋಗ ದಿಂದ ಜಾರುತ್ತಿದೆ. ಪರಮಾತ್ಮನನ್ನು ಹೃದಯದೇಗುಲದಲ್ಲಿ ಕಂಡುಕೊಂಡಿಲ್ಲ. ಇತ್ತ ಕರ್ಮಮಾರ್ಗವೂ ಸಾಧ್ಯವಾಗದೆ ಅತ್ತ ಯೋಗಮಾರ್ಗದ ಸಿದ್ಧಿಯೂ ಆಗದೆ ಉಭಯಭ್ರಷ್ಟನಾಗುವ ಇಂತಹವನಿಗೆ ಮುಂದೆ ಏನು ಗತಿ? ಎಂಬುದು ತಾತ್ಪರ್ಯ.

ಜೀವನಕ್ಷೇತ್ರದ ಸಾಧನೆಯ ಮಧ್ಯದಲ್ಲಿ ಹತಾಶರಾಗುವ ನಮ್ಮಂತಹ ಸಾಧಕರ ಪ್ರಶ್ನೆಯೇ ಕುರುಕ್ಷೇತ್ರದಲ್ಲಿ ಶ್ರೀಕೃಷ್ಣನನ್ನು ಕುರಿತು ಕೇಳಿದ ಮಹಾವೀರ ಅರ್ಜುನನ ಪ್ರಶ್ನೆಯಾಗಿದೆ. ಇದಕ್ಕುತ್ತರವಾಗಿ ಶ್ರೀಕೃಷ್ಣಪರಮಾತ್ಮನು ಯಾರು ಶ್ರದ್ಧಾಳುವಾಗಿ ಸನ್ಮಾರ್ಗದಲ್ಲಿ ಸಾಗುತ್ತಾ ಸಾಧನೆಯನ್ನು ಮಾಡುವನೋ ಅವ ನಿಗೆ ಎಂದಿಗೂ ದುರ್ಗತಿ ಉಂಟಾಗದು ಎಂದು ಹೇಳುತ್ತಾನೆ:

**ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।**
**ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ ॥**

*(ಗೀತಾ, ೬.೪೦)*

‘ಪಾರ್ಥ! ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಅವನಿಗೆ ವಿನಾಶವೆಂಬುದಿಲ್ಲ. ಮಗು! ಒಳ್ಳೆಯ ಕಾರ್ಯ ಮಾಡಿದವನು ಎಂದೂ ದುರ್ಗತಿಯನ್ನು ಹೊಂದುವುದೇ ಇಲ್ಲ’ ಎಂದು ಪರಿಪೂರ್ಣ ಭರವಸೆ ನೀಡುತ್ತಾನೆ.

ಇಹಲೋಕದಲ್ಲೂ ಪರಲೋಕದಲ್ಲೂ ವಿನಾಶವಿಲ್ಲ ಎಂಬ ಶ್ರೀಕೃಷ್ಣನ ಮಾತಿನ ಅರ್ಥವೇನು?

ಇದನ್ನು ಹೀಗೆ ವಿವರಿಸಬಹುದು : ಸಾಧಕನು ಪ್ರಯತ್ನ ಮಾಡದೇ ಇರುವುದರಿಂದ ಅಥವಾ ವಯೋಧರ್ಮದಿಂದ ಅವನ ಮನಸ್ಸು ಧ್ಯಾನದಿಂದ ವಿಚಲಿತವಾಗುತ್ತದೆ. ಆದರೆ ಅವ ನಿಗೆ ಸಾಧನೆ ಮಾಡಿ ಗುರಿಮುಟ್ಟಬೇಕೆಂಬ ವಿಚಾರದಲ್ಲಿ ಸಂಪೂರ್ಣ ಶ್ರದ್ಧೆ ಇದ್ದಾಗ, ತನ್ನಿಂದ ಆತ್ಮದರ್ಶನ ಸಾಧ್ಯ ಎಂಬ ನಂಬಿಕೆ ಇದ್ದಾಗ ಅವನು ಸಾಧನೆಯ ಮಾರ್ಗವನ್ನು ಬಿಟ್ಟು ಹೋಗಿರುವುದಿಲ್ಲ. ಆದರೆ ಮುಂದೆ ನಡೆಯಲಾಗದೆ ನಿಂತಲ್ಲೇ ನಿಂತುಬಿಟ್ಟಿರುತ್ತಾನೆ. ಹಾಗೆಂದು ಅವನು ಕಂಗೆಡಬೇಕಾಗಿಲ್ಲ. ಭಗವದರ್ಪಣಬುದ್ಧಿಯಿಂದ ಅವನು ಅದುವರೆಗೂ ಮಾಡಿದ ಸತ್ಕರ್ಮಗಳ ಸತ್ಫಲಗಳು ಆಗ ಅವನ ಸಹಾಯಕ್ಕೆ ಒದಗಿಬರುತ್ತವೆ. **‘ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್’** *(ಗೀತಾ, ೨.೪೦)* ಎಂದು ಶ್ರೀಕೃಷ್ಣನೇ ಹೇಳಿದಂತೆ ಇಂತಹ ಧರ್ಮದಿಂದ ಕೂಡಿದ ಅತ್ಯಲ್ಪ ಸಾಧನೆಯೂ ಜನನ–ಮರಣರೂಪವಾದ ಮಹಾನ್ ಭಯದಿಂದ ನಮ್ಮನ್ನು ರಕ್ಷಿಸುತ್ತದೆ. ಇಂತಹ ಭಕ್ತರನ್ನು ಭಗವಂತ ತನ್ನೊಳಗೇ ಸೇರಿಸಿಕೊಳ್ಳುತ್ತಾನೆ.

ಪೂಜ್ಯ ಸ್ವಾಮಿ ಸೋಮನಾಥಾನಂದರು ತಮ್ಮ ‘ಗೀತಾಭಾವ ಧಾರೆ’ಯಲ್ಲಿ ಗೀತೆಯ ಈ ಶ್ಲೋಕವನ್ನು ಅರ್ಥೈಸುತ್ತಾ, ಇಲ್ಲಿ ಸೋಲೆಂಬುದು ಗೆಲುವಿನ ಮೆಟ್ಟಿಲು ಎಂದಾಗುತ್ತದೆ. ಒಳ್ಳೆಯದನ್ನು ಮಾಡಿದವನಿಗೆ ದುರ್ಗತಿ ಎಂದಿಗೂ ಇಲ್ಲ. ನಾವು ಕಡಲೆಕಾಯಿಯನ್ನು ಬಿತ್ತಿದರೆ ಅದು ಹತ್ತಾಗಿ, ನೂರಾಗಿ ಬೆಳೆಯುವುದು. ಇದು ಹೇಗೆ ಪ್ರಕೃತಿಯ ನಿಯಮವೋ ಭಗವಂತನ ನಿಯಮವೂ ಇದೇ ಆಗಿದೆ. ನಮ್ಮ ಚಿಕ್ಕ ಪ್ರಯತ್ನವನ್ನೂ ವ್ಯರ್ಥವಾಗದಂತೆ ಅವನು ನೋಡಿಕೊಳ್ಳುತ್ತಾನೆ. ನಾವು ಒಂದು ಹೆಜ್ಜೆ ಮುಂದೆ ಇಟ್ಟರೆ ಭಗವಂತ ಹತ್ತು ಹೆಜ್ಜೆ ನಮ್ಮ ಸಮೀಪಕ್ಕೆ ಬರುತ್ತಾನೆ ಎನ್ನುತ್ತಾರೆ.

ಇದನ್ನೇ ಸಂತ ಜ್ಞಾನೇಶ್ವರ ಮಹಾರಾಜರು ತಮ್ಮ ‘ಜ್ಞಾನೇಶ್ವರಿ’ಯಲ್ಲಿ ಮೋಕ್ಷಪ್ರಾಪ್ತಿಯ ಇಚ್ಛೆಯುಳ್ಳವನಿಗೆ ಮೋಕ್ಷವಲ್ಲದೆ ಮತ್ತೊಂದು ಗತಿ ಇದೆಯೆ? ಆದರೆ ಅವನಿಗೆ ನಡುವೆ ಸ್ವಲ್ಪ ವಿಶ್ರಾಂತಿ ಅಗತ್ಯವೆನಿಸುತ್ತದೆ. ಹಾಗಿಲ್ಲದೆ ಅವನು ಅಭ್ಯಾಸದ ನಡಿಗೆಯನ್ನು ತೀವ್ರಗೊಳಿಸಿದ್ದಿದ್ದರೆ ಆಯುಷ್ಯವು ಮುಗಿಯುವ ಮೊದಲೇ ಮೋಕ್ಷದ ಊರನ್ನು ತಲುಪಿಬಿಡುತ್ತಿದ್ದನು. ಹಾಗೆಂದು ಅವನು ವ್ಯಥೆಪಡಬೇಕಿಲ್ಲ.

**ಪರೀ ತೇ ತುಲಾ ವೇಗು ನವ್ಹೇಚಿ**
**ಮ್ಹಣೌನಿ ವಿಸಾವಾ ತರೀ ನಿ ಕಾ ಚಿ**
**ಪಾಠೀ ಮೋಕ್ಷು ತವ ತೈ ಸಾ ಚಿ । ಠೇವಿಲಾ ಅಸೇ**

*(೬ವಿ ೪೪೦)*

ಎಂದರೆ, ಅವನಲ್ಲಿ ಅಷ್ಟು ವೇಗವು ಇಲ್ಲದುದರಿಂದ ಅವನು ವಿಶ್ರಾಂತಿ ಪಡೆಯಬೇಕಾಯಿತು. ಹೀಗಿದ್ದರೂ ಕೊನೆಗಂತೂ ಮೋಕ್ಷಪ್ರಾಪ್ತಿ ನಿಶ್ಚಿತ ಎನ್ನುತ್ತಾರೆ ಸಂತ ಜ್ಞಾನೇಶ್ವರರು.

ಹೀಗೆ ಶ್ರೀಕೃಷ್ಣ ಅರ್ಜುನನ ಮೂಲಕ ಮಾನವಕೋಟಿಗೆ ಬಹು ದೊಡ್ಡ ಭರವಸೆಯ ಸಂದೇಶವನ್ನು ನೀಡುತ್ತಿದ್ದಾನೆ. ವಿಷಯವಸ್ತುಗಳೆಂಬ ನದಿಯ ಹರಿವಿಗೆ ವಿರೋಧವಾಗಿ ಈಜಲು ಪ್ರಯತ್ನಿಸುವ ಸಾಧಕನು ಜಯಶೀಲನಾಗದಿದ್ದರೂ ಅವನಿಗೆ ಕೆಡುಕಂತೂ ಎಂದಿಗೂ ಆಗದು. ಭಗವಂತನೆಡೆಗೆ ನಡೆಯುವ ಅವನ ಒಂದೊಂದು ಹೆಜ್ಜೆಯೂ ಒಂದೊಂದು ಉತ್ತಮ ಸಂಸ್ಕಾರವನ್ನು ಕೊಡುತ್ತಾ ಹೋಗುವುದು. ಅವನ ಪ್ರಯತ್ನ ಎಂದಿಗೂ ವಿಫಲವಾಗದು. ಹಿಂದೆ ಲೆಕ್ಕವಿಲ್ಲದಷ್ಟು ಜನ್ಮಗಳನ್ನು ಪಡೆದಿರಬಹುದು. ಮುಂದೆ ಪೂರ್ಣತೆಯನ್ನು ಪಡೆಯುವವರೆಗೆ ಅನೇಕ ಜನ್ಮಗಳನ್ನು ಪಡೆಯಬೇಕಾಗಬಹುದು. ಅದಕ್ಕಾಗಿ ಚಿಂತಿಸುವುದು ತರವಲ್ಲ. ಈ ದೇಹ ಅಳಿದರೂ ನಾವು ಮಾಡಿದ ಸತ್ಕರ್ಮಗಳ ಫಲ ಅಳಿಯದು. ಅದು ನೆರಳಿನಂತೆ ಹಿಂಬಾಲಿಸು

ವುದು, ಎಂದಿಗೂ ನಷ್ಟವಾಗದು ಎಂಬ ಸರಳ ಸುಂದರ ವಿವರಣೆಯನ್ನು ಸ್ವಾಮಿ ಸೋಮನಾಥಾನಂದರು ನೀಡಿದ್ದಾರೆ.

ಸಂತ ಭದ್ರಗಿರಿ ಅಚ್ಯುತದಾಸರು ಸತ್ಕರ್ಮಕ್ಕೆ ಸತ್ಫಲ ಇದ್ದೇ ಇರುತ್ತದೆ ಎಂಬ ವಿಷಯಕ್ಕೆ ಒಂದು ಸುಂದರ ದೃಷ್ಟಾಂತವನ್ನು ಕೊಡುತ್ತಾರೆ :

ಒಮ್ಮೆ ನಾರದ ಮಹರ್ಷಿಗಳು ಶ್ರೀಕೃಷ್ಣನನ್ನು ಕುರಿತು, ''ಓ ದೇವದೇವಾ! ಸುಭದ್ರೆಯು ನಿನ್ನ ಹತ್ತಿರದ ತಂಗಿಯಾದರೂ ಅವಳನ್ನು ಕೃಷ್ಣೆ ಎಂದು ಕರೆಯದೆ ಜನ ದ್ರೌಪದಿಯನ್ನು 'ಕೃಷ್ಣೆ' ಎಂದು ಕರೆಯುತ್ತಾರಲ್ಲ ಕಾರಣವೇನು?'' ಎಂದು ಪ್ರಶ್ನಿಸಿದರು. ಅದಕ್ಕೆ ಪರಮಾತ್ಮನು, ''ನಾರದ, ದ್ರೌಪದಿಗೆ ಈ ಹೆಸರು ಅವಳಿಗೆ ನನ್ನ ಮೇಲಿರುವ ಪ್ರೇಮಭಕ್ತಿಗನುಗುಣವಾಗಿ ಬಂದಿದೆ. ನೀನು ಬೇಕಾದರೆ ಅದನ್ನು ಪರೀಕ್ಷಿಸಬಹುದು'' ಎನ್ನುತ್ತಾನೆ.

ನಾರದರು ಸುಭದ್ರೆ ಪಾಂಚಾಲಿಯರಿದ್ದ ಅಂತಃಪುರಕ್ಕೆ ಬಂದು, ಮೊದಲು ಸುಭದ್ರೆಯನ್ನು ಕಂಡು ಗಾಬರಿಗೊಂಡಂತೆ ನಟಿಸುತ್ತಾ, ''ಅಮ್ಮಾ ಸುಭದ್ರಾ, ಕೃಷ್ಣನ ಕೈಬೆರಳಿಗೆ ಗಾಯವಾಗಿ ರಕ್ತ ಸುರಿಯುತ್ತಿದೆ, ಬೇಗ ಒಂದು ವಸ್ತ್ರದ ತುಂಡನ್ನು ಕೊಡು'' ಎಂದು ಕೇಳಿದಾಗ ಸುಭದ್ರೆ, ''ಅಯ್ಯೋ! ಕೃಷ್ಣನ ಕೈಗೆ ಗಾಯವಾಗಿ ರಕ್ತ ಸುರಿಯುತ್ತಿದೆಯೆ? ಇದೋ ಬಂದೆ. ವಸ್ತ್ರವನ್ನು ತರುತ್ತೇನೆ'' ಎಂದು ಒಳಗೆ ಓಡಿದಳು. ಅದೇ ಸಮಯಕ್ಕೆ ಸರಿಯಾಗಿ ದ್ರೌಪದಿ ಅಲ್ಲಿಗೆ ಬಂದು ನಾರದರನ್ನು ಕಂಡು ಕೈಮುಗಿದಳು. ಅವರು ಅವಳಿಗೂ ಅದೇ ವಿಷಯ ತಿಳಿಸಿದಾಗ ದ್ರೌಪದಿ ''ಅಯ್ಯೋ, ಕೃಷ್ಣನ ಕೈಯಲ್ಲಿ ರಕ್ತ ಸೋರುತ್ತಿರುವುದೆ? ಇದೋ ತೆಗೆದುಕೊಳ್ಳಿ'' ಎಂದು ಹೇಳುತ್ತಾ ಒಡನೆಯೇ ತಾನುಟ್ಟಿದ್ದ ಅತ್ಯಂತ ಬೆಲೆಬಾಳುವ ಸೀರೆಯ ಸೆರಗನ್ನೇ ಹರಿದು ನಾರದರ ಕೈಗಿತ್ತು ಕೃಷ್ಣನ ಗಾಯದ ನೋವನ್ನು ತಾನೂ ಅನುಭವಿಸುತ್ತಾ ಚಡಪಡಿಸಿದಳು. ಆಗ ನಾರದರಿಗೆ ಜನರು ದ್ರೌಪದಿಯನ್ನು 'ಕೃಷ್ಣೆ' ಎಂದು ಏಕೆ ಕರೆಯುತ್ತಾರೆ ಎಂಬುದು ಅರಿವಾಯಿತು. ದ್ರೌಪದಿಯ ಈ ವಸ್ತ್ರದಾನದಿಂದ ಮುಂದೆ ತುಂಬಿದ ಸಭೆಯಲ್ಲಿ ದುಷ್ಟ ದುಶ್ಶಾಸನನಿಂದ ಅವಳ ವಸ್ತ್ರಾಪಹರಣವಾಗುವ ಸಂದರ್ಭದಲ್ಲಿ ಅಕ್ಷಯವಸ್ತ್ರವಾಗಿ ಅವಳ ಮಾನರಕ್ಷಣೆಯಾಗುವುದು ನಾವೆಲ್ಲರೂ ಬಲ್ಲ ವಿಷಯ. ಹೀಗೆ ಸತ್ಕರ್ಮಕ್ಕೆ ಸತ್ಫಲವಿದ್ದೇ ಇರುತ್ತದೆ.

ಆಧುನಿಕ ಸರ್ವಜ್ಞ ಎಂದೇ ಪ್ರಸಿದ್ಧರಾದ ಶ್ರೀ ಡಿ. ವಿ. ಗುಂಡಪ್ಪನವರು ತಮ್ಮ ಗೀತಾರ್ಥತಾತ್ಪರ್ಯವಾದ 'ಜೀವನ ಧರ್ಮಯೋಗ'ದಲ್ಲಿ ಈ ವಿಚಾರವಾಗಿ ತಮ್ಮದೇ ಆದ ಸುಂದರ ಶೈಲಿಯಿಂದ ಹೀಗೆ ವಿವರಿಸುತ್ತಾರೆ :

''ಅರ್ಜುನ ಕೃಷ್ಣನನ್ನು ಕುರಿತು, 'ಹೌದು ಕೃಷ್ಣ ನನಗೇನೋ ಶ್ರದ್ಧೆಯುಂಟು. ಆದರೆ ನನ್ನ ಮನೋನಿಗ್ರಹ ಪ್ರಯತ್ನ ಪೂರ್ತಿಗೊಳ್ಳದೆ ಅರ್ಧದಲ್ಲಿ ಮುರಿದು ಬೀಳಬಹುದು. ಆಗ ನನ್ನ ಗತಿ ಏನು? ಮೋಡದ ತುಂಡೊಂದು ದೊಡ್ಡ ಮೋಡದಿಂದ ಬೇರೆಯಾದರೆ ಏನಾಗುತ್ತದೆ? ಗಾಳಿಗೆ ಸಿಕ್ಕಿ ತನ್ನ ಗುರುತು ಕೂಡ ಉಳಿಸಿಕೊಳ್ಳಲಾಗದೆ ಚದುರಿ ಹೋಗುತ್ತದೆ. ನನ್ನ ಪಾಡೂ ಹಾಗೆಯೇ ಅಲ್ಲವೇ? ಓಟ ಓಡಿ ಕಾಲುಮುರಿದುಕೊಂಡದ್ದಷ್ಟೇ ಪ್ರಯೋಜನವಾದರೆ? ಧ್ಯಾನಾನುಸಂಧಾನವನ್ನು ಬಿಟ್ಟಂತೆಯೂ ಇಲ್ಲ, ಸಾಧಿಸಿದಂತೆಯೂ ಆಗಲಿಲ್ಲ'' ಎಂದು ಕೇಳಿದಾಗ ಭಗವಂತ ಕೊಡುವ ಆಶ್ವಾಸನೆ ನಮ್ಮ ಕಿಂಚಿತ್ ಪ್ರಯತ್ನವೂ ವ್ಯರ್ಥವಾಗದು ಎಂದು. ಪುನಃ ಶ್ರೀಕೃಷ್ಣ, ಪ್ರಯತ್ನಪಟ್ಟು ಭಂಗವಾದರೂ ಅದರಿಂದ ನೀನು ನಷ್ಟಪಡಲಾರೆ. ಒಳ್ಳೆಯದನ್ನು ಸಾಧಿಸಲು ಯತ್ನಿಸಿದವನಿಗೆ ಎಂದಿಗೂ ದುರ್ಗತಿ ಬಾರದು ಎಂದು ಹೇಳುತ್ತಾನೆ.

ಶ್ರೀ ಡಿ.ವಿ.ಜಿ. ಯವರು ಇದಕ್ಕೊಂದು ಅರ್ಥಪೂರ್ಣ ದೃಷ್ಟಾಂತವನ್ನು ಕೊಡುತ್ತಾರೆ : ಮನೆಯ ಹುಡುಗನೊಬ್ಬನನ್ನು ದೊಡ್ಡ ಪರೀಕ್ಷೆಗೆ ಓದು ಎಂದು ಹಿರಿಯರು ಪ್ರೇರಿಸುತ್ತಾರೆ. ಅವನು ಬುದ್ಧಿವಂತ, ಅಧ್ಯಯನಶೀಲ. ಪರೀಕ್ಷೆಯಲ್ಲಿ ಪಾಸ್ ಮಾಡಿಯಾನು ಎಂದು ಅವರಿಗೆ ಖಾತರಿ. ಆದರೆ ಹುಡುಗನಿಗೆ ಧೈರ್ಯವಿಲ್ಲದೆ ಹೋಗಬಹುದು. ಅವನು ಪಾಸ್ ಆಗದಿದ್ದರೆ ಗತಿಯೇನು ಎಂದು ಕೇಳಿಯಾನು. ಆಗ ಆ ಹಿರಿಯರು, 'ಆಗದಿದ್ದರೆ ಬೇಡ. ನೀನು ಓದಿದ್ದರಿಂದ ನಷ್ಟವೇನು? ಈ ಸಾರಿಯ ಪರೀಕ್ಷೆಗಾಗಿ ಮಾಡಿಕೊಂಡ ತಯಾರಿ ಈಗ ಅಲ್ಲದಿದ್ದರೆ ಮುಂದಿನ ಬಾರಿಯ ಪರೀಕ್ಷೆಯಲ್ಲಿ ಉಪಯೋಗಕ್ಕೆ ಬರುತ್ತದೆ' ಎಂದು ಸಮಾಧಾನ ಹೇಳುತ್ತಾರೆ.

ಇದರಂತೆಯೇ ಇದೆ ಭಗವಂತನ ಉತ್ತರ. ಇದೇ ಭರವಸೆಯನ್ನು ಹಿಂದೆಯೂ ಸ್ವಾಮಿ ಅರ್ಜುನನಿಗೆ ಕೊಟ್ಟಿದ್ದ: ಧರ್ಮವು ಸ್ವಲ್ಪವೇ ಆಗಿದ್ದಾಗ್ಯೂ ಅದು ಮಹತ್ತರವಾದ ಭಯದಿಂದ ಮನುಷ್ಯನನ್ನು ಕಾಪಾಡಬಲ್ಲುದಾಗುತ್ತದೆ.

ಡಿ.ವಿ.ಜಿ. ಯವರು ಮುಂದುವರಿಸುತ್ತಾ ಮೇಲೆ ಹೇಳಿದ್ದು ಬರಿಯ ಪ್ರೋತ್ಸಾಹದ ಮಾತಲ್ಲ, ಯೋಗಸಿದ್ಧಿಯಾಗತಕ್ಕದ್ದು ಎಂಥವರಿಗೂ ಸೋಪಾನಕ್ರಮದಲ್ಲಿಯೇ. ಒಂದೇ ಜನ್ಮದ ಪ್ರಯತ್ನದಿಂದ ಪೂರ್ಣಫಲ ಲಭಿಸದು. ಒಂದು ಜನ್ಮದ ಪುಣ್ಯದಿಂದ ಮತ್ತೊಂದು ಜನ್ಮದಲ್ಲಿ ಇನ್ನೂ ಉತ್ತಮವಾದ ಜೀವನ ಸಂದರ್ಭ, ಮಗದೊಂದು ಜನ್ಮದಲ್ಲಿ ಉತ್ತಮಕುಲಪ್ರಸೂತನಾಗಿ ಯೋಗಿಗಳ ವಂಶದಲ್ಲಿ ಹುಟ್ಟಿ ಈ ಜೀವ ಜ್ಞಾನಸಂಸ್ಕಾರವನ್ನು ಪಡೆಯುತ್ತಾನೆ. ಪೂರ್ವಜನ್ಮದ ಅಭ್ಯಾಸಬಲದಿಂದ ಮನಸ್ಸು ಯೋಗಕ್ಕೆ ಪರಿಪಕ್ವವಾಗಿ ಅವನು ಜ್ಞಾನಸಿದ್ಧಿಯನ್ನು ಪಡೆಯುತ್ತಾನೆ. ಹೀಗೆ ಮೋಕ್ಷಾರ್ಹತೆಯು ಬಹುವಿಧ ಸಂಸ್ಕಾರಗಳಿಂದ ಉಂಟಾಗತಕ್ಕದ್ದು. ಹೇಗೆ ಸುಂದರ ಶಿಲಾವಿಗ್ರಹವಾಗಲು ಶಿಲೆಗೆ ಶಿಲ್ಪಿಯ ಉಳಿಯ ಪೆಟ್ಟುಗಳು ಬೀಳಬೇಕೋ ಹಾಗೆಯೇ ಒಂದು ಜೀವದ ಸದ್ಗತಿಗೂ ಉತ್ತಮ ಸಂಸ್ಕಾರಗಳೆಂಬ ಪೆಟ್ಟುಗಳು ಬೀಳುವುದು ಆವಶ್ಯಕ. ಆದ್ದರಿಂದ ಮೋಕ್ಷವಿಷಯಕ್ಕೆ ಆತುರ ಪಡದೆ ನಿರಂತರ ಯೋಗಪ್ರಯತ್ನವೇ ನಮ್ಮ ಕರ್ತವ್ಯವಾಗಬೇಕು.

*('ಜೀವನಧರ್ಮಯೋಗ' – ಪು. ೨೧೮–೨೨೦)*

ಹೀಗೆ ಕಲ್ಯಾಣಕಾರ್ಯಗಳನ್ನು ಮಾಡುವ ಯಾವನೂ ಅಧೋಗತಿಯನ್ನು ಹೊಂದುವುದಿಲ್ಲ ಎಂಬುದು ತಾತ್ಪರ್ಯ. ಗೀತೆಯಲ್ಲಿ ಬರುವ ಅನೇಕ ಸೂಕ್ತಿಗಳಲ್ಲಿ ಈ ಸೂಕ್ತವು ಅತ್ಯಂತ ಸ್ಫೂರ್ತಿದಾಯಕವಾದುದು. ನಕಾರಾತ್ಮಕ ಚಿಂತನೆಗಳ ಅಂಧಕಾರವನ್ನು ನಿವಾರಿಸಿ 'ಭರವಸೆ'ಯ ಬೆಳಕನ್ನು ಬೀರುವುದು. ಪ್ರಯತ್ನಪೂರ್ವಕ ಸಾಧನೆ ಮಾಡಲು ನಮ್ಮಲ್ಲಿ ಶ್ರದ್ಧೆಯನ್ನು ತುಂಬುವುದು.

ಅಧ್ಯಾತ್ಮ ಸಾಧನೆಯ ಸಣ್ಣಪುಟ್ಟ ಸತ್ಕರ್ಮಗಳಿಗೂ ಸತ್ಫಲ ಸಿಗುವುದು ನಿಶ್ಚಿತ! ಶ್ರೀಕೃಷ್ಣಪ್ರಭುವೇ ಹೇಳುವಂತೆ,

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।**
**ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥**

*(ಗೀತಾ ೯.೨೬)*

'ಯಾರು ಭಕ್ತಿಯಿಂದ ಒಂದು ಎಲೆ, ಒಂದು ಹೂವು, ಒಂದು ಹಣ್ಣು ಅಥವಾ ಬರಿಯ ನೀರನ್ನು ಕೊಡುವರೋ ಅಂತಹ ಶುದ್ಧ ಚಿತ್ತ ಉಳ್ಳವರು ಭಕ್ತಿಯಿಂದ ಸಮರ್ಪಿಸಿದ ಅದನ್ನು ನಾನು ಸ್ವೀಕರಿಸುತ್ತೇನೆ' ಎನ್ನುತ್ತಾನೆ ಪರಮಾತ್ಮ!

ದ್ರೌಪದಿ ದೇವಿಯ ಬಳಿಯಿದ್ದ ಅಕ್ಷಯಪಾತ್ರೆಗೆ ಅಂಟಿದ್ದ ಒಂದು ಅಗುಳನ್ನು ತಿಂದ ಶ್ರೀಕೃಷ್ಣನು, ದೂರ್ವಾಸರು ಹಾಗೂ ಅವರ ಸಾವಿರಮಂದಿ ಶಿಷ್ಯರಿಂದ ಪಾಂಡವರಿಗೆ ಬಂದಿದ್ದ ದೊಡ್ಡ ಆಪತ್ತನ್ನು ನಿವಾರಿಸುತ್ತಾನೆ. ಭಕ್ತಿಯಿಂದ ಗಜರಾಜನು ಅರ್ಪಿಸುತ್ತಿದ್ದ ಕೇವಲ ಒಂದೇ ಒಂದು 'ಪುಷ್ಪ'ವು ಅವನಿಗೆ ಮೊಸಳೆಯಿಂದಲೂ, ಭವಬಂಧನದಿಂದಲೂ ಬಿಡುಗಡೆ ಕೊಡಿಸಿ, ಅವನು ಮೋಕ್ಷವನ್ನು ಪಡೆಯಲು ಸಾಧ್ಯವಾಯಿತು. ಭಕ್ತೆ ಶಬರಿ ಪ್ರಭು ಶ್ರೀರಾಮನಿಗೆ ಪ್ರೇಮದಿಂದಲೂ, ಭಕ್ತಿಯಿಂದಲೂ ಅರ್ಪಿಸಿದ ಆಯ್ದ 'ಫಲ'ವು ಅವಳನ್ನು ಪರಮಾತ್ಮನ ಪರಂಧಾಮಕ್ಕೆ ಕರೆದೊಯ್ದಿತು. ಇನ್ನು ಭಕ್ತ ರಂತಿದೇವ ಬರಿಯ ಜಲವನ್ನೇ ಪರಮಾತ್ಮನಿಗೆ ಅರ್ಪಿಸಿ ಮೋಕ್ಷವನ್ನು ಪಡೆಯುತ್ತಾನೆ.

ಇಷ್ಟೆಲ್ಲಾ ದೃಷ್ಟಾಂತಗಳು ನಮ್ಮ ಕಣ್ಣುಗಳ ಮುಂದೆ ಇರುವಾಗ ಹೇಗೆ ಅತ್ಯಲ್ಪ ಕರ್ಮವೂ ಅತ್ಯುನ್ನತ ಫಲವನ್ನು ಕೊಡಬಲ್ಲದು ಎಂಬುದು ನಮ್ಮ ಅರಿವಿಗೆ ಬಾರದೆ ಇರುವುದೆ?

ಆದ್ದರಿಂದ ಭಗವಂತ ನೀಡಿರುವ ಈ 'ದೊಡ್ಡ ಭರವಸೆ'ಯನ್ನು ಸದಾ ಸ್ಮರಿಸುತ್ತಾ ಅತ್ಯಂತ ಧೈರ್ಯದಿಂದಲೂ, ನಂಬಿಕೆಯಿಂದಲೂ ನಮ್ಮಿಂದ ಸಾಧ್ಯವಾಗುವ ಸಾಧನೆಯನ್ನು ಪ್ರಾಮಾಣಿಕವಾಗಿ ಮಾಡಿ ಅವನ ಕೃಪೆಗಾಗಿ ಪ್ರಾರ್ಥಿಸೋಣ. ಜನ್ಮಜನ್ಮಾಂತರಗಳಲ್ಲೂ ನಮ್ಮೊಡನೆಯೇ ಇರುವ ಪರಮಾತ್ಮನನ್ನು ಪೂರ್ಣವಾಗಿ ನಂಬಿ ನಿರ್ಭಯವಾಗಿ ಮುಂದೆ ಸಾಗೋಣ. ನಮ್ಮ ಪ್ರತಿಯೊಂದು ಪುಣ್ಯಕಾರ್ಯಗಳ ಲೆಕ್ಕ ಅವನ ಬಳಿ ಇರುತ್ತದೆ. ಆಧ್ಯಾತ್ಮಿಕ ಜೀವನದಲ್ಲಿ ಪ್ರಾಮಾಣಿಕವಾಗಿ ಹಾಗೂ ಗಂಭೀರ ವಾಗಿ ಸಾಧನೆ ಮಾಡುವ ಸಂಕಲ್ಪ ಹೊತ್ತ ಸಾಧಕನಿಗೆ 'ದುರ್ಗತಿ' ಎಂಬುದಿಲ್ಲ ಎಂದು ಅವನೇ 'ಭರವಸೆ' ನೀಡಿರುವಾಗ ನಾವು ಭಯಪಡುವ ಅಗತ್ಯವಿಲ್ಲ. ನಾವು ಒಂದು ಹೆಜ್ಜೆ ಮುಂದೆ ಇಟ್ಟರೆ ಅವನು ಹತ್ತು ಹೆಜ್ಜೆ ಸಮೀಪ ಬರುತ್ತಾನಂತೆ! ಇಂತಹ ಒಂದು ನಿಶ್ಚಲ ನಂಬಿಕೆಯನ್ನು ಬೆಳೆಸಿಕೊಂಡು ಒಂದು ಹೆಜ್ಜೆಯನ್ನಾದರೂ ಮುಂದೆ ಇಡುವ ಪ್ರಯತ್ನವನ್ನು ನಾವು ಮಾಡೋಣ.

ಕಟ್ಟುನಿಟ್ಟಾದ ನೈತಿಕ ಜೀವನವು ಸಾಧಕನ ಆಧ್ಯಾತ್ಮಿಕ ಪ್ರಗತಿ ಮತ್ತು ಪ್ರಾಪ್ತಿಗೆ ನಿಜವಾದ ಅಸ್ತಿಭಾರವೆಂದು ಎಷ್ಟು ಒತ್ತಿ ಹೇಳಿದರೂ ಸಾಲದು. ಮನಸ್ಸನ್ನು ಕಾಮ, ಕ್ರೋಧ ಮತ್ತು ಲೋಭಗಳ ಹಿಡಿತದಿಂದ ಬಿಡಿಸಿ ಪರಿಶುದ್ಧಗೊಳಿಸುವುದರಲ್ಲಿಯೇ ಸಾಧನೆಯು ಅಡಗಿದೆ. ಮನಸ್ಸು ಸಂಪೂರ್ಣವಾಗಿ ಪರಿಶುದ್ಧವಾದ ಹೊರತು, ಸಾಧಕನು ತನ್ನೊಳಗೆ ಮತ್ತು ಹೊರಗೆ ಎಲ್ಲೆಲ್ಲೂ ದೇವರನ್ನು ಕಾಣಲು ಸಾಧ್ಯವಿಲ್ಲ.

*— ಸ್ವಾಮಿ ರಾಮದಾಸ್*
*('ಸಾಧಕರಿಗೆ ಸೂಚನೆಗಳು', ಪು. ೪೮)*


***Statement about ownership and other particulars about Viveka Prabha (according to Form IV Rule 8, circulated by Registrar of Newspapers for India)***

| | |
|---|---|
| 1. Place of Publication | : **Mysore 570 020** |
| 2. Periodicity of Publication | : **Monthly** |
| 3. Printer's Name | : **Swami Muktidananda** |
| Nationality | : **Indian** |
| Address | : **Adhyaksha, Sri Ramakrishna Ashrama, Yadavagiri, Mysore 570 020** |
| 4. Publisher's Name | : **Swami Muktidananda** |
| Nationality | : **Indian** |
| Address | : **Adhyaksha, Sri Ramakrishna Ashrama, Yadavagiri, Mysore 570 020** |
| 5. Editor's Name | : **Swami Jnanayogananda** |
| Nationality | : **Indian** |
| Address | : **Sri Ramakrishna Ashrama Yadavagiri Mysore 570 020** |
| 6. Name & Addresses of the individuals who own the newspaper and partners or share-holders holding more than 1% of the capital | : **Adhyaksha, Sri Ramakrishna Ashrama, Yadavagiri Mysore 570 020** |

**I, Swami Muktidananda, hereby declare that the particulars given above are true to the best of my knowledge and belief.**

*sd.*
***Swami Muktidananda***
01.03.2025 Signature of the publisher